# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.146-2020** **ಪಿ . ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಶಂಕರಪ್ಪ<br>ನಂಜನಗೂಡು |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 03-09-2022. |

**<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಎಸ್.ಎಸ್.ಕೆ ವಕೀಲರಿಂದಃ</u>**

ನಾನು ಮತ್ತು ಪ್ರತಿವಾದಿ ಒಂದೇ ಊರಿನವರು ಎಂದರೆ ಸರಿ. ಈಗ ನನಗೂ ಮತ್ತು ಪ್ರತಿವಾದಿಗೂ ಅಷ್ಟಕಷ್ಟೆ ಎಂದರೆ ಸರಿ. ನಿಪಿ-1 ರಲ್ಲಿ ತೋರಿಸಿರುವ ಸ್ವತ್ತು ಮನೆ ಆಗಿರುತ್ತದೆ. ದಾವಾ ಷೆಡ್ಯೂಲ್ ಸ್ವತ್ತು ಪ್ರತಿವಾದಿ ತಂದೆ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪ್ರತಿವಾದಿ ತಂದೆ ಸದರ ಸ್ವತ್ತನ್ನು ಪ್ರತಿವಾದಿಗೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಷೆಡ್ಯೂಲ್ ಸ್ವತ್ತು ಪ್ರತಿವಾದಿ ತಂದೆಗೆ ದರಖಾಸ್ತು ಮುಖೇನ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಪ್ರತಿವಾದಿಯ ತಂದೆ ಯಾವುದೇ ದಾಖಲೆಯನ್ನು ಮಾಡಿರದ ಕಾರಣ ಸರಿದ ಸ್ವತ್ತಿನಲ್ಲಿ ಆತನ ಮಕ್ಕಳಿಗೆಲ್ಲರಿಗೂ ಹಕ್ಕರು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ನಿಪಿ-1 ಅನ್ನು ಮಾಡಿಸಿಕೊಳ್ಳುವ ಸಮಯ ನಾನು ಪ್ರತಿವಾಯ ಸಹೋದರನನ್ನು ಕೇಳಿದ್ದು, ಆತನು ಆಧಾರ ಪತ್ರ ಮಾಡಿಸಿಕೊಳ್ಳುವಂತೆ ತಿಳಿಸಿರುತ್ತಾನೆ ಎಂದು ನುಡಿಯುತ್ತಾರೆ. ಆಧಾರ ಪತ್ರಕ್ಕೆ ಪ್ರತಿವಾದಿಯ ಸಹೋದರನ ಸಹಿ ಪಡೆಯಲು ನನಗೆ ಯಾವುದೇ ತೊಂದರೆ ಇರಲಿಲ್ಲ. ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ ಪ್ರತಿವಾದಿ ಮಕ್ಕಳಿಗೂ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ ಪ್ರತಿವಾದಿಯ ಮಕ್ಕಳಿಗೂ ಹಕ್ಕು ಇದ್ದು ನಾನು ಅವರ ಸಹಿಯನ್ನು ನಿಪಿ-1 ಕ್ಕೆ ಪಡೆಯದೇ ಇರುವ ಕಾರಣ ನಾನು ಪ್ರತಿವಾದಿ ವಿರುದ್ಧ ಸಲ್ಲಿಸಿರುವ ದಾವಾವು ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ.

2. ಪ್ರತಿವಾದಿಗೆ ಮದ್ಯಪಾನ ಮಾಡುವ ಅಭ್ಯಾಸ ಇರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ಮದ್ಯಪಾನ ಮಾಡುವ ಅಭ್ಯಾಸವಿರುವುದರಿಂದ ನಾನು ಆತನಿಗೆ ಮದ್ಯಪಾನ ಮಾಡಿಸಿ ನಿಪಿ-1 ರ ಆಧಾರ ಪತ್ರವನ್ನು ಬರೆಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ . ನಾನು ಪ್ರತಿವಾದಿಗೆ ಯಾವುದೇ

ಹಣವನ್ನು ಪಾವತಿ ಮಾಡದೇ ನಿಪಿ-1 ರ ಆಧಾರ ಪತ್ರವನ್ನು ಬರೆಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

3. ನಾನು ನನ್ನ ಗಾರೆ ಕೆಲಸ ಮತ್ತು ಕಬ್ಬು ಬೆಳೆಯಿಂದ ಬಂದ ಆದಾಯದಿಂದ ಪ್ರತಿವಾದಿಗೆ ಸಾಲವಾಗಿ ಹಣ ನೀಡಿರುತ್ತೇನೆ. ನನಗೆ ಪ್ರತಿವಾದಿಗೆ ಸಾಲವಾಗಿ ಹಣ ನೀಡುವಷ್ಟು ಆರ್ಥಿಕ ಚೈತನ್ಯ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗೆ ನೋಂದಣಾಧಿಕಾರಿಯವರ ಸಮಕ್ಷಮ ಹಣ ನೀಡಿರುತ್ತೇನೆ. ನಾನು ಪ್ರತಿವಾದಿಗೆ ನೋಂದಣಾಧಿಕಾರಿಯವರ ಸಮಕ್ಷಮ ಹಣ ನೀಡದೇ ಇದ್ದರೂ ಹಣ ನೀಡಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಣ ನೀಡಿದಾಗ ಶಿವಣ್ಣ ಮತ್ತು ವೆಂಕಟೇಶ ಎಂಬುವವರು ಇದ್ದರೂ. ಸದರಿಯವರನ್ನು ಸಾಕ್ಷಿ ವಿಚಾರಣೆ ಮಾಡಿಸಲು ತೊಂದರೆ ಇದೆಯೇ ಎಂಬ ಪ್ರಶ್ನೆಗೆ ಸಾಕ್ಷಿ ಪ್ರತಿವಾದಿಯೇ ಸಾಕ್ಷಿದಾರರನ್ನು ಕರೆತಂದಿದ್ದು, ನಾನು ನೋಂದಣಾಧಿಕಾರಿಯವರ ಕಚೇರಿಗೆ ಒಬ್ಬನೇ ಹೋಗಿದ್ದೆನು ಎಂದು ನುಡಿಯುತ್ತಾರೆ. ದಾವಾ ಷೆಡ್ಯೂಲ್ ಸ್ವತ್ತು ದರಖಾಸ್ತು ಮುಖೇನ ಬಂದಿರುವುದರಿಂದ ಅದನ್ನು ಮಾರಾಟ ಅಥವಾ ಭೋಗ್ಯ ಮಾಡಬಾರದು ಎಂಬ ನಿಯಮವಿದ್ದು ಸದರಿ ನಿಯಮವನ್ನು ನಾನು ಉಲ್ಲಂಘನೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗೆ ಹಣ ನೀಡದೇ ಇರುವುದರಿಂದ ನಿಪಿ-1 ರಲ್ಲಿ ಹೇಳಿರುವಂತೆ ಅಸಲು ಮತ್ತು ಬಡ್ಡಿ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗೆ ಯಾವುದೇ ಹಣ ನೀಡದೇ ಇರುವುದರಿಂದ ಈ ದಾವಾವವು ಊರ್ಜಿತವಾಗತಕ್ಕದಲ್ಲ ಎಂದರೆ ಸರಿಯಲ್ಲ. ನಾನು ಈ ದಾವಾದಲ್ಲಿ ಕೋರಿರುವ ಪರಿಹಾರಕ್ಕೆ ಅರ್ಹನಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**